

## ಅಂತ

'ಅಂತ' (1981) ಕನ್ನಡ ಚಿತ್ರರಂಗದ ಮುಖ್ಯ ಚಿತ್ರಗಳಲ್ಲೊಂದು. ಆದರೆ, ಈ ಸಿನಿಮಾ ಕೂಡ 'ಅತಿಯಾದ ಹಿಂಸೆ' ಎನ್ನುವ ಕಾರಣದಿಂದಾಗಿ ಸೆನ್ಸಾರ್ ಅಪಸ್ವರಕ್ಕೆ ಗುರಿಯಾಗಿತ್ತು. ಹಾಗೆ ನೋಡಿದರೆ, ನಿರ್ಮಾಣ ಹಂತದಲ್ಲೇ ಎಸ್.ವಿ. ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಅಂತ' ಚಿತ್ರ ಸೆನ್ಸಾರ್‌ನಿಂದ ಹಸಿರುನಿಶಾನೆ ಪಡೆಯುವ ಬಗ್ಗೆ ಕೆಲವರಿಗೆ ಆಕ್ಷೇಪವಿತ್ತು.

ತೆರೆಕಂಡ ಮೇಲೂ 'ಅಂತ' ಚಿತ್ರದ ತೊಂದರೆಗಳು ಕೊನೆಗೊಳ್ಳಲಿಲ್ಲ. ಸಿನಿಮಾದಲ್ಲಿನ ಹಿಂಸಾತ್ಮಕ ದೃಶ್ಯಗಳ ಬಗ್ಗೆ ಕೆಲವರು ಆತಂಕ ವ್ಯಕ್ತಪಡಿಸಿದ್ದರು. ಆಗ ಸೆನ್ಸಾರ್ ಮಂಡಳಿಯ ಸದಸ್ಯರು ಮದರಾಸ್‌ನಿಂದ ಬೆಂಗಳೂರಿಗೆ ಬಂದು ಚಿತ್ರಮಂದಿರದಲ್ಲಿ ಸಿನಿಮಾ ವೀಕ್ಷಿಸಿದರು. 'ನಾವು ನೋಡಿದ ಸಿನಿಮಾ ಇದಲ್ಲ. ಕತ್ತರಿಸಿದ ಅನೇಕ ದೃಶ್ಯಗಳನ್ನು ಇದರಲ್ಲಿ ಸೇರಿಸಲಾಗಿದೆ' ಎಂದು ಆ ಸದಸ್ಯರು ದೂರಿದರು. ಚಿತ್ರದ ಪ್ರಿಂಟ್‌ಗಳನ್ನು ಜಿಲ್ಲಾಡಳಿತ ವಶಕ್ಕೆ ಪಡೆಯುವುದರೊಂದಿಗೆ ಬೆಂಗಳೂರಿನಲ್ಲಿ ಚಿತ್ರದ ಪ್ರದರ್ಶನ ಸ್ಥಗಿತಗೊಂಡಿತು. ಪ್ರಕರಣ ನ್ಯಾಯಾಯಲದ ಕಟ್ಟೆಯೇರಿತು. ನಿರ್ಮಾಪಕ ಮಾರುತಿ ಹಾಗೂ ನಿರ್ದೇಶಕರು ದೆಹಲಿಗೆ ಹೋಗಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಭೇಟಿಯಾಗಿ, ನ್ಯಾಯ ಒದಗಿಸಿಕೊಡುವಂತೆ ಅಹವಾಲು ಸಲ್ಲಿಸಿದರು. ಕೊನೆಗೆ ನ್ಯಾಯಾಲಯದಲ್ಲಿ ತೀರ್ಪು ಸಿನಿಮಾ ಪರವಾಗಿ ಬಂತು. ಆದರೂ ವಶಪಡಿಸಿಕೊಂಡ ಚಿತ್ರದ ಪ್ರತಿ ತಕ್ಷಣ ವಾಪಸ್ ದೊರಕಲಿಲ್ಲ. ಹೈಕೋರ್ಟ್ ಮಧ್ಯಪ್ರವೇಶ ಮಾಡುವುದರೊಂದಿಗೆ 'ಅಲಂಕಾರ್' ಚಿತ್ರಮಂದಿರದಲ್ಲಿ 'ಅಂತ' ಮರುಪ್ರದರ್ಶನ ಆರಂಭಗೊಂಡಿತು. ಇದೆಲ್ಲ ಆಗುವಷ್ಟರಲ್ಲಿ ಎರಡು ತಿಂಗಳು ಕಳೆದಿದ್ದವು. ಇಷ್ಟೆಲ್ಲ ವಿವಾದಕ್ಕೆ ಗುರಿಯಾದ ಸಿನಿಮಾ 25 ವಾರಗಳ ಭರ್ಜರಿ ಪ್ರದರ್ಶನ ಕಂಡಿದ್ದು ವಿಶೇಷ.



## ಅನುಭವ

ಕನ್ನಡ ಸಿನಿಮಾಕ್ಕೆ ಲೈಂಗಿಕತೆಯನ್ನು, ದ್ವಂದ್ವಾರ್ಥದ ಮಾತುಗಳನ್ನು ಪರಿಚಯಿಸಿದ ಕುಖ್ಯಾತಿ 'ಅನುಭವ' ಚಿತ್ರದ್ದು. ಕಾಶೀನಾಥ್ ನಿರ್ದೇಶನದ 'ಅನುಭವ' (1984) ನೋಡಿದ ಸೆನ್ಸಾರ್ ಅಧಿಕಾರಿಯೊಬ್ಬರು– 'ಇಷ್ಟು ಕೆಟ್ಟ, ಅಸಭ್ಯ ಚಿತ್ರವನ್ನು ನಾನು ನೋಡಿದ್ದು ಇದೇ ಮೊದಲು' ಎಂದು ಹೇಳಿದ್ದರು. ನಾಲ್ಕು ತಿಂಗಳ ಕಾಲ ಹಗ್ಗಜಗ್ಗಾಟದ ನಂತರ, ಹಲವು ಕಟ್‌ಗಳೊಂದಿಗೆ 'ಅನುಭವ' ತೆರೆಕಂಡಿತು. ಈ ಚಿತ್ರದ ನಾಯಕಿ ಅಭಿನಯಾ 'ಅತ್ಯುತ್ತಮ ನಟಿ'ಯೆಂದು ರಾಜ್ಯಪ್ರಶಸ್ತಿ ಪಡೆದರು.

## ಕೆಂಡದ ಮಳೆ

ಕುಂ. ವೀರಭದ್ರಪ್ಪ ಅವರ 'ಕೆಂಡದ ಮಳೆ' (1987) ಕೃತಿ ಆಧರಿಸಿದ ಅದೇ ಹೆಸರಿನ ಸಿನಿಮಾ ಪ್ರಾದೇಶಿಕ ಮಂಡಳಿಯಲ್ಲಿ ಅನುತ್ತೀರ್ಣಗೊಂಡಿತ್ತು. ಗೌರಿಶಂಕರ್ ನಿರ್ದೇಶನದ ಈ ಸಿನಿಮಾ ರಿವೈಸಿಂಗ್ ಕಮಿಟಿಯ ಮುಂದೆ ಹೋಯಿತು. ರಿವೈಸಿಂಗ್ ಕಮಿಟಿ ಕೂಡ ಉದಾತ್ತವಾಗಿರಲಿಲ್ಲ. ಅದು ಇಪ್ಪತ್ತೊಂದು ಕತ್ತರಿ ಪ್ರಯೋಗಗಳಿಗೆ ಸೂಚಿಸಿತು. ಆ ತೀರ್ಮಾನವನ್ನು ಒಪ್ಪದ ಚಿತ್ರತಂಡ, 'ಕೆಂಡದ ಮಳೆ'ಯನ್ನು ಟ್ರಿಬ್ಯುನಲ್‌ಗೆ ಕೊಂಡೊಯ್ದಿತು. ಟ್ರಿಬ್ಯೂನಲ್ ಸೂಚಿಸಿದ್ದು ಎರಡು ಕಟ್ ಮಾತ್ರ. ಅಂದ ಹಾಗೆ, ಸೆನ್ಸಾರ್‌ನ ಇರುಸುಮುರುಸಿಗೆ ಕಾರಣವಾದದ್ದು ಚಿತ್ರದ ಕಥಾವಸ್ತುವಿನಲ್ಲಿದ್ದ ಸೂಕ್ಷ್ಮ. ಮಠವೊಂದರ ನೆರಳಲ್ಲಿ ನಲುಗುವ ಮುಸ್ಲಿಂ ಕುಟುಂಬವೊಂದರ ಕಥೆಯನ್ನು 'ಕೆಂಡದ ಮಳೆ' ಒಳಗೊಂಡಿತ್ತು.

## ಗಾಳಿಬೀಜ

'ಇದು ಸಿನಿಮಾ ಅಲ್ಲ' ಎನ್ನುವ ಮೂಲಕ 'ಸಿಬಿಎಫ್‌ಸಿ' ನಿರಾಕರಣೆಗೆ ಒಳಗಾದ 'ಗಾಳಿಬೀಜ' ಚಿತ್ರ ರೂಪಿಸಿದ ಚರ್ಚೆ ದೊಡ್ಡದು. ಬಾಬು ಈಶ್ವರಪ್ರಸಾದ್ ನಿರ್ದೇಶನದ 'ಗಾಳಿಬೀಜ' (2015) ಚಿತ್ರವನ್ನು 'ಒಂದು ಸಿನಿಮಾ' ಎಂದು ಒಪ್ಪಿಕೊಳ್ಳಲು ಪ್ರಾದೇಶಿಕ ಸೆನ್ಸಾರ್ ಮಂಡಳಿ ನಿರಾಕರಿಸಿತು. 'ಇದು ಅಧಿಕಪ್ರಸಂಗತನ' ಎಂದು 'ಸಿಬಿಎಫ್‌ಸಿ' ಕ್ರಮ ಟೀಕೆಗೊಳಗಾಯಿತು. ಇದೇ ಸಿನಿಮಾ 2014ರಲ್ಲಿ ಗೋವಾದಲ್ಲಿ ನಡೆದ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ 'ನ್ಯಾಷನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್' ಆಯೋಜಿಸಿದ್ದ 'ಚಿತ್ರಬಜಾರ್'ನಲ್ಲಿ ಪ್ರದರ್ಶನ ಕಂಡು ಮೆಚ್ಚುಗೆ ಗಳಿಸಿತ್ತು. ಅಲ್ಲದೆ 'ಚಿತ್ರಬಜಾರ್'ನಲ್ಲಿ ಶಿಫಾರಸು ಪಡೆದಿದ್ದ 8 ಚಿತ್ರಗಳಲ್ಲಿ ಇದೂ ಒಂದಾಗಿತ್ತು.

## ಪೊಲೀಸ್ ಸ್ಟೋರಿ ಹಾಗೂ ಕೋಣ ಈದೈತೆ

ಥ್ರಿಲ್ಲರ್ ಮಂಜು ನಿರ್ದೇಶನದ 'ಪೊಲೀಸ್ ಸ್ಟೋರಿ' (1996) ಸಾಯಿಕುಮಾರ್ ಅವರಿಗೆ ನಾಯಕನಟನ ವರ್ಚಸ್ಸು ತಂದುಕೊಟ್ಟ ಸಿನಿಮಾ. ಹಿಂಸಾಚಾರ ಹೇರಳವಾಗಿದೆ ಎನ್ನುವ ಕಾರಣಕ್ಕಾಗಿ ಈ ಸಿನಿಮಾ ವಿರುದ್ಧ ಪ್ರಾದೇಶಿಕ ಸಮಿತಿ ಅಸಮಾಧಾನ ವ್ಯಕ್ತಪಡಿಸಿ, ಸಾಕಷ್ಟು ಕಟ್‌ಗಳನ್ನು ಸೂಚಿಸಿತು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತು. ನ್ಯಾಯಾಲಯದ ಸೂಚನೆಯ ಮೇರೆಗೆ 'ಪೊಲೀಸ್ ಸ್ಟೋರಿ' ತೆರೆ ಕಂಡಿತು. ಈ ಸಿನಿಮಾ ದೊಡ್ಡಮಟ್ಟದಲ್ಲಿ ಗೆಲ್ಲುವ ಮೂಲಕ ಇದೇ ಬಗೆಯ ಅನೇಕ ಚಿತ್ರಗಳು ತಯಾರಾದುದು ಈಗ ಇತಿಹಾಸ. ತೆಲುಗು, ತಮಿಳು ಹಾಗೂ ಹಿಂದಿ ಭಾಷೆಗೂ 'ಪೊಲೀಸ್ ಸ್ಟೋರಿ' ಡಬ್ ಆಗಿದೆ. 2007ರಲ್ಲಿ 'ಪೊಲೀಸ್ ಸ್ಟೋರಿ–2' ಚಿತ್ರವೂ ತೆರೆಕಂಡಿದೆ.

ಜಯಶ್ರೀ ದೇವಿ ನಿರ್ದೇಶನದ 'ಕೋಣ ಈದೈತೆ' (1995) ಸೆನ್ಸಾರ್ ಮಂಡಳಿಯ ಕೆಂಗಣ್ಣಿಗೆ ಗುರಿಯಾದ ಮತ್ತೊಂದು ಸಿನಿಮಾ. ಈ ಚಿತ್ರ ಕಾನೂನನ್ನು ಲೇವಡಿ ಮಾಡುತ್ತದೆ ಎನ್ನುವ ಕಾರಣಕ್ಕಾಗಿ ಪ್ರಮಾಣಪತ್ರ ನಿರಾಕರಿಸಲಾಯಿತು. ಹಲವು ದೃಶ್ಯಗಳ ಮರು ಚಿತ್ರೀಕರಣ ಮಾಡಿದ ಚಿತ್ರತಂಡ, ಚಿತ್ರಕ್ಕೆ ಬೇರೆಯದೇ ರೂಪು ನೀಡಿ ಪ್ರಮಾಣಪತ್ರ ಪಡೆಯಿತು.

## ಕಿರಗೂರಿನ ಗಯ್ಯಾಳಿಗಳು

ಸುಮನ್ ಕಿತ್ತೂರು ನಿರ್ದೇಶನದ 'ಕಿರಗೂರಿನ ಗಯ್ಯಾಳಿಗಳು' (2016) ಪೂರ್ಣಚಂದ್ರ ತೇಜಸ್ವಿ ಅವರ ಜನಪ್ರಿಯ ಕಥೆಯನ್ನು ಆಧರಿಸಿದ ಸಿನಿಮಾ. ಈ ಸಿನಿಮಾದಲ್ಲಿನ ಕೆಲವು ಬೈಗುಳಗಳು ಸೆನ್ಸಾರ್ ಮೂಲಕ ಮ್ಯೂಟ್ ಆಗಿದ್ದವು. ಪ್ರಚಾರ ಸಾಮಗ್ರಿಗಳಿಗೆ ಹಸಿರು ನಿಶಾನೆ ತೋರಿಸಿದ್ದ ಮಂಡಳಿ, ಅದೇ ದೃಶ್ಯಗಳಿಗೆ ಸಿನಿಮಾದಲ್ಲಿ ತಕರಾರು ಎತ್ತುವ ಮೂಲಕ ಟೀಕೆಗೊಳಗಾಯಿತು. 'ತೇಜಸ್ವಿ ಅವರ ಕೃತಿಯನ್ನೇ ಸೆನ್ಸಾರ್ ಮಂಡಳಿ ವಿಮರ್ಶೆಗೆ ಒಳಪಡಿಸಿದೆ. ಇದು ಶ್ರೇಷ್ಠ ಸಾಹಿತಿಗೆ ಮಾಡಿರುವ ಅವಮಾನ' ಎಂದು ತೇಜಸ್ವಿ ಅಭಿಮಾನಿಗಳು ಟೀಕಿಸಿದರು. ಚಿತ್ರದಲ್ಲಿ ಚಿಕ್ಕಮಕ್ಕಳು ಬೆತ್ತಲಾಗಿ ಓಡಿಬರುವ ಸನ್ನಿವೇಶವು 'ನಗ್ನತೆ'ಯನ್ನು ತೋರಿಸುತ್ತದೆ ಎನ್ನುವ ಸೆನ್ಸಾರ್ ಹೇಳಿಕೆಯೂ ಆಕ್ಷೇಪಕ್ಕೆ ಕಾರಣವಾಯಿತು. ಶಿವರುದ್ರಯ್ಯ ನಿರ್ದೇಶನದ 'ಮಾರಿಕೊಂಡವರು' ಸಿನಿಮಾದಲ್ಲಿನ ಕೆಲವು ಶಬ್ದಗಳಿಗೆ ಕತ್ತರಿಪ್ರಯೋಗ ನಡೆದುದು ಕೂಡ ಸೆನ್ಸಾರ್ ಮಂಡಳಿ ಸದಸ್ಯರಿಗೆ ಸಾಹಿತ್ಯದ ಜ್ಞಾನವಿಲ್ಲ ಎನ್ನುವಂತಹ ಮಾತುಗಳಿಗೆ ಕಾರಣವಾಯಿತು.